ಹೇಳಿದ್ದೇವೆ. ನಮ್ಮ ಮಕ್ಕಳು ಕೂಡ ಶಾಲೆಯಲ್ಲಿ ಅವರ ಜೊತೆಯೇ ಇರುತ್ತಾರೆ. ಕೆಲವೊಂದು ಕಾರಣದಿಂದ ನಾವು ಕ್ರಮೇಣ, ಒಬ್ಬರು ಅಥವಾ ಇಬ್ಬರು ಅಧ್ಯಾಪಕರನ್ನು ನೇಮಿಸಿಕೊಳ್ಳಬೇಕಾದೀತು. ಏನು ಕಲಿಸಬೇಕು, ಹೇಗೆ ಕಲಿಸಬೇಕು ಎನ್ನುವುದನ್ನು ನಾವು ಅವರಿಗೆ ಹೇಳುತ್ತೇವೆ. ನಿಮ್ಮ ಮನೆ ಕೂಡ ಶಾಲೆಯೇ ಆಗಿರುತ್ತದೆ. ನಿಮ್ಮ ಅಪ್ಪ ಮತ್ತು ಅಮ್ಮನೇ ಉಪಾಧ್ಯಾಯರು. ಕೆಲವು ಸಲ ನೀವು ನಮ್ಮ ಸ್ವಾವಲಂಬಿ ಶಾಲೆಗೆ ಹೋಗಿ ಅಲ್ಲಿ ಕಲಿಯುತ್ತೀರಿ. ಸದ್ಯಕ್ಕೆ ಅಲ್ಲಿ ಕೂಡ ನಿಮ್ಮ ಅಪ್ಪ ಅಮ್ಮನೇ ಉಪಾಧ್ಯಾಯರು. ಅನಂತರ ಅಗತ್ಯ ಕಂಡರೆ ಹೊರಗಿನ ಶಿಕ್ಷಕರನ್ನು ನೇಮಿಸುತ್ತೇವೆ. ತಾವಾಗಿ ಬಂದು ಕಲಿಸುವ ಅಧ್ಯಾಪಕರು ಕೂಡ ನಮಗೆ ಸಿಗುತ್ತಾರೆ. ಅದೆಲ್ಲ ಹೇಗೆ, ಯಾರು ಎಂಥದು ಎಂದು ನಿಧಾನವಾಗಿ ನಿಮಗೆ ತಿಳಿಯುತ್ತದೆ. ಶಾಲೆಯನ್ನು ಸ್ವಚ್ಛವಾಗಿಡುವುದು ಕೂಡ ನಮ್ಮದೇ ಕೆಲಸ'.

ಅಭಿ ಹೇಳಿದ, 'ನಿಮ್ಮ ಮನೆಗಳಲ್ಲಿ ನೀವು ರೇಡಿಯೋ ಇಟ್ಟುಕೊಳ್ಳಬಹುದು. ನಾವು ಶಾಲೆಗಳಲ್ಲಿ ನಮ್ಮ ಕಿವಿಯನ್ನು ಉಪಯೋಗಿಸಿ ಕಲಿಯುತ್ತೇವೆ. ಕಿವಿ ಕಲಿಕೆಯಲ್ಲಿ ಅತ್ಯಂತ ಮುಖ್ಯವಾದ ಅಂಗ. ನಾವು ಮುಖ್ಯವಾಗಿ ಕಲಿಯುವುದು ಆಲಿಸುವ, ಓದುವ ಮತ್ತು ಬರೆಯುವ ಮೂಲಕ. ಕೇವಲ ನೋಡುವ ಮೂಲಕ ಕಲಿಯುವುದು ಬಹಳ ಕಡಿಮೆ. ಆದ್ದರಿಂದ ಟೀವಿಯನ್ನು ಅಗತ್ಯವಿದ್ದರೆ ಮಾತ್ರ ಬಳಸಿ. ಟೀವಿಯನ್ನು ಹೇಗೆ ಬಳಸಬಹುದು, ಎಷ್ಟು ಬಳಸಬಹುದು ಇತ್ಯಾದಿ ವಿಚಾರಗಳನ್ನು ನೀವೇ ನಿಮ್ಮ ಮನೆಯಲ್ಲಿ ಚರ್ಚಿಸಿ. ಅನಂತರ ಒಂದು ದಿನ ನಾವೆಲ್ಲ ಒಟ್ಟಿಗೆ ಕುಳಿತು ಆ ಕುರಿತು ಮಾತಾಡೋಣ. ಇನ್ನೊಂದು ವಿಚಾರ; ನಿಮಗೆ ತಮಾಷೆ ಅಂತ ಅನಿಸಬಹುದು. ಆದರೂ ಹೇಳಿ ಬಿಡುತ್ತೇನೆ, 'ಅಪ್ಪ ಅಮ್ಮ ಮಾತ್ರವಲ್ಲ, ಮಣ್ಣು ಗಾಳಿ, ನೀರು, ಮರ ಗಿಡ ಮೃಗ ಪಕ್ಷಿ ಎಲ್ಲವೂ ನಮ್ಮ ಗುರುಗಳಾಗಲು ಸಾಧ್ಯ. ಹೇಗೆ ಎನ್ನುವುದನ್ನು ಮುಂದಿನ ಬಾರಿ ಸೇರಿದಾಗ ಚರ್ಚಿಸುವ' ಎಂದು ಅಭಿ ನಗು ಬಂದವರ ಜೊತೆ ನಕ್ಕು ಮಾತು ಮುಗಿಸಿ, 'ಇನ್ನು ನರಹರಿಯ ಮಾತು ಕೇಳಿ' ಎಂದ. ನಗು ಮುಗುಳು ನಗುವಾಗಿ ಬದಲಾಯಿತು.

ತಕ್ಷಣ ಅಭಿ ತುಸು ಏರಿದ ದನಿಯಲ್ಲಿ ಹೇಳಿದ, ದಿನದಲ್ಲಿ ಕನಿಷ್ಠ ಒಂದು ಗಂಟೆ ಮಣ್ಣಿನಲ್ಲಿ, ಅಂದರೆ ತೋಟದಲ್ಲಿ ಕೆಲಸ ಮಾಡಿದರೆ, ಯಾವ ಕಾಯಿಲೆಯೂ ಬರುವುದಿಲ್ಲ. ಪಕ್ಷಿಗಳ ಗಾಯನ ಕೇಳುತ್ತಾ, ಸಸ್ಯಗಳ ಜೊತೆ ಪ್ರೀತಿಯಿಂದ ಮಾತಾಡುತ್ತಾ ಕೆಲಸ ಮಾಡಬೇಕು.

'ಮಾಮ, ನಂಗೆ ನೆಗಡಿ ಆಗಿದೆ' ಎಂದಳು ಸುಕೃತಿಯ ಕಿರಿಯ ಮಗಳು ಕಾಂತಿ.

'ನೆಗಡಿ ಕಾಯಿಲೆ ಅಲ್ಲ' ಎಂದ ಅಭಿ. ಎಲ್ಲರೂ ನಕ್ಕರು.

'ನರಹರಿ ಹೇಳಿದ, 'ಸ್ವಾವಲಂಬಿ ಕುಟುಂಬದ ಎಲ್ಲಾ ಹಿರಿಯರೂ ಬೆಳಿಗ್ಗೆ ಐದು ಗಂಟೆಗೆ ಏಳಬೇಕು. ಮಕ್ಕಳು ಆರು ಗಂಟೆಯ ತನಕ ಮಲಗಬಹುದು. ಬೇಗ ಏಳುವುದಾದರೆ ಆಕ್ಷೇಪವಿಲ್ಲ. ಹಿರಿಯರು ಏಳು ಗಂಟೆಯ ತನಕ ತೋಟದಲ್ಲಿ ಕೆಲಸ ಮಾಡುತ್ತಾರೆ. ಕಿರಿಯರು ಅವರಿಗೆ ಸಹಕಾರ ನೀಡಬಹುದು. ಆದರೆ ಅಪ್ಪ ಅಮ್ಮ ಓದಲು ನಿರ್ಧರಿಸಿದ ಹೊತ್ತಿನಲ್ಲಿ ಓದಬೇಕು' ಅಷ್ಟರಲ್ಲಿ ಸೂರ್ಯಕಾಂತ ರಾನಡೆ ಬಂದರು. ಎಲ್ಲರೂ ಎದ್ದು ನಿಂತು ವಂದಿಸಿದರು.

ಅವರನ್ನು ಕುಳಿತುಕೊಳ್ಳಲು ಹೇಳಿ, ನರಹರಿ, 'ಸರ್', ನಾವು ಬಹಳ ಮುಖ್ಯವಾದ ಒಂದು ವಿಷಯವನ್ನು ಚರ್ಚಿಸುತ್ತಿದ್ದೇವೆ. ನೀವು ಬಂದದ್ದು ಒಳ್ಳೆಯದಾಯಿತು ವಿಷಯ ಏನೆಂದು ನಾನು ನೇರವಾಗಿ ಹೇಳಿಬಿಡುತ್ತೇನೆ' ಎಂದು ಹೇಳಿ ತುಸು ಯೋಚಿಸಿ, ಸ್ವಾವಲಂಬಿ ಕುಟುಂಬ ಮತ್ತು ಅದರ ನಿರ್ವಹಣೆಯ ಬಗ್ಗೆ ವಿವರವಾಗಿ ಹೇಳಿ, 'ಒಂದಷ್ಟು ಕಾಲ ಐಟಿ ಉದ್ಯೋಗದಲ್ಲಿ ನಾವೆಲ್ಲರೂ ಪರಿಣತಿ ಪಡೆದಿರುವವರು ನಾವು ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ನಮ್ಮ ಐಟಿ ಕೆಲಸವನ್ನು ಜೋಡಿಸುವ ಬಗ್ಗೆ ಯೋಚಿಸುತ್ತಿದ್ದೇವೆ. ಮುಖ್ಯವಾಗಿ, ಮರಗಿಡಗಳೂ ಸದಸ್ಯರಾಗಿರುವ ನಮ್ಮ ಸ್ವಾವಲಂಬಿ ಕುಟುಂಬಕ್ಕೆ ಕ್ರಮೇಣ ಹೆಚ್ಚು ಹಣ ಬೇಕಾಗಬಹುದು ಎಂಬ ಕಾರಣದಿಂದ ನಮಗೆ ಈ ಯೋಚನೆ ಬಂದಿದೆ' ಎಂದ.

ಅಭಿ, 'ನಿಮ್ಮ ಹಣದ ಅವಶ್ಯಕತೆಗಿಂತ ನಮ್ಮ ಹಣದ ಅವಶ್ಯಕತೆಯೇ ಮುಖ್ಯ ಎಂದು ಮರಗಿಡಗಳು ಪಿಸುಗುಟ್ಟುವುದು ನನ್ನ ಕಿವಿಗೆ ಬಿದ್ದಿದೆ' ಅಭಿಯ ಮಾತಿಗೆ ರಾನಡೆಯೂ ಸೇರಿದಂತೆ ಎಲ್ಲರೂ ಜೋರಾಗಿ ನಕ್ಕರು.

ನರಹರಿ ಮಾತು ಮುಂದುವರಿಸಿದ, 'ವಾರದಲ್ಲಿ ಎರಡು ದಿನ ಯೋಗಾಸನಗಳನ್ನು ಕಲಿಸಲು ಒಬ್ಬರು ಯೋಗ ಗುರು ಬರುತ್ತಾರೆ. ಕನಿಷ್ಠ ಒಂದು ಗಂಟೆ ಯೋಗ ತರಗತಿ ಇರುತ್ತದೆ. ಇನ್ನು ಬಹಳ ಮುಖ್ಯವಾದ ವಿಚಾರ, ಅಭಿ, ಮುರಾರಿ, ನಳಿನಿ ಮತ್ತು ಸುಕೃತಿಗೆ ಈ ತನಕ ಮಾಡುತ್ತಿದ್ದ ಐಟಿ ಕೆಲಸವನ್ನು ಮನೆಯಲ್ಲೇ ಇದ್ದುಕೊಂಡು ದಿನಕ್ಕೆ ಎಂಟು ಗಂಟೆ ಮೀರದಷ್ಟು ಮಾಡಲು ಯಾವುದೇ ಕಂಪೆನಿ ಅವಕಾಶ ನೀಡುವುದಾದರೆ, ಅವರು ಆ ಕೆಲಸ ಪಡೆಯಲು ಪ್ರಯತ್ನ ಆರಂಭಿಸಬಹುದು. ಐಟಿ ಕೆಲಸ ನಮ್ಮ ಪ್ರಧಾನ ಮನೆಯಲ್ಲಿ ನಡೆಯುತ್ತದೆ. ಒಂದು ದಿನ ನಾವು ಕೃಷಿ ಉತ್ಪನ್ನದಿಂದಲೇ ಚೆನ್ನಾಗಿ ಜೀವಿಸಲು ಶಕ್ತರಾದರೆ ಐಟಿ ಕೆಲಸವನ್ನು ಬಿಡಬಹುದು' ಎಂದ.

ಬಹಳ ದಿನಗಳಿಂದ ಮ್ಲಾನವಾಗಿದ್ದ ನಳಿನಿ ಮತ್ತು ಸುಕೃತಿಯ ಮುಖದಲ್ಲಿ ಮಂದಹಾಸ ಮೂಡಿತು. ಕೂಡಲೇ ನರಹರಿ, 'ನಮ್ಮ ಸ್ವಾವಲಂಬಿ ಕುಟುಂಬದಲ್ಲಿ ಎಲ್ಲರೂ ಸ್ವತಂತ್ರರು. ಪ್ರೀತಿ ಮತ್ತು ಸ್ವಾತಂತ್ರ್ಯಕ್ಕೆ ಯಾವ ಅಡೆತಡೆಯೂ ಉಂಟಾಗುವುದಿಲ್ಲ. ಆದರೆ ಮೊಬೈಲ್, ಕಂಪ್ಯೂಟರ್, ಇಂಟರ್ನೆಟ್ ಮತ್ತು ಟೀವಿ ಬಳಕೆಯಲ್ಲಿ ಎಲ್ಲರೂ ತಮ್ಮನ್ನು ತಾವೇ ಕಠಿಣವಾದ ಶಿಸ್ತಿಗೆ ಒಳಪಡಿಸಿಕೊಳ್ಳಬೇಕು. ಸಹಕಾರ ಬದುಕಿನ ಒಂದು ಆಯಾಮವಾಗಿರುತ್ತದೆ. ಓದಿನಲ್ಲಿ, ಕೆಲಸಗಳಲ್ಲಿ ಅರಿವನ್ನು ಹಂಚುವುದರಲ್ಲಿ ಒಬ್ಬರಿನ್ನೊಬ್ಬರಿಗೆ ಸಹಕರಿಸುವುದರಲ್ಲಿ ಅಪಾರವಾದ ಆನಂದವಿದೆ. ಅದನ್ನು ಎಲ್ಲರೂ ಕಾಣಬೇಕು, ಅನುಭವಿಸಬೇಕು. ತಿಂಗಳಿಗೆ ಒಂದು ಅಥವಾ ಎರಡು ಬಾರಿ ನಾವು ಈ ರೀತಿ ಇಲ್ಲಿ ಸೇರುತ್ತೇವೆ' ಎಂದು ನರಹರಿ ಮಾತು ನಿಲ್ಲಿಸಿ, ರಾನಡೆಯೊಡನೆ, 'ಸರ್ ನಿಮ್ಮ ಅಭಿಪ್ರಾಯ ಏನಾದರೂ ಇದ್ದರೆ ಹೇಳಿ' ಎಂದ.

ರಾನಡೆ, 'ನನಗೆ ಅನಿಸಿದ್ದನ್ನೆಲ್ಲ ನರಹರಿ ಹೇಳಿಯಾಗಿದೆ. ನೀವು ಚರ್ಚಿಸುತ್ತಿದ್ದ ವಿಷಯವಾಗಿ ನಾನು ಒಂದು ಮಾತು ಹೇಳಬಹುದು, ಏನೆಂದರೆ, ನಮ್ಮ ಆರೋಗ್ಯವನ್ನು ನಾವು ಚೆನ್ನಾಗಿಟ್ಟುಕೊಳ್ಳದಿದ್ದರೆ ಏನು ಸಂಪಾದಿಸಿದರೂ ಎಷ್ಟು ಸಂಪಾದಿಸಿದರೂ ಪ್ರಯೋಜನವಿಲ್ಲ ಎನ್ನುವುದು ನರಹರಿಯ ಮಾತಿನಿಂದ ಸ್ಪಷ್ಟವಾಗಿದೆ" ಎಂದು ತುಸು ತಡೆದು, ಕಂಪ್ಯೂಟರ್ ಎಂಬ ಸಹಚರಿ ಮತ್ತು ಫೋನು ಎಂಬ ಸಂಗಾತಿಯ ಜೊತೆ ದಿನದಲ್ಲಿ ಹದಿನಾರು ಗಂಟೆ ಕೆಲಸ ಮಾಡಿ ತಿಂಗಳಿಗೆ ಒಂದು ಲಕ್ಷ ಪಗಾರ ಪಡೆಯುವುದಕ್ಕಿಂತ ದಿನದಲ್ಲಿ ಎಂಟು ಗಂಟೆ ಕೆಲಸಮಾಡಿ ಅದು ಎಷ್ಟು ಸಂಪಾದನೆ ತರುತ್ತದೆಯೋ ಅದರಲ್ಲಿ ಸಂತೃಪ್ತಿ ಸಂತೋಷದಿಂದ ಬದುಕುವುದು ಒಳ್ಳೆಯದು, ಶ್ರೇಷ್ಠವಾದ ಬದುಕು ಅದೇ ಎಂದು ನನ್ನ ಭಾವನೆ, ಲಕ್ಷ ಲಕ್ಷ ಸಂಪಾದನೆಯಿಂದ ಸಂತೃಪ್ತಿ ಸಂತೋಷ ಬರುವುದಿಲ್ಲ, ಅದರ ಬದಲು ಏನು ಏನೇನು ಬರುತ್ತದೆ ಎಂದು ನಿಮಗೆ ಗೊತ್ತಿದೆ. ಮಕ್ಕಳಿಗೆ ಗೊತ್ತಿಲ್ಲದಿರಬಹುದು. ಅವರಿಗೆ ಹಿರಿಯರು ಹೇಳಬೇಕು" ಎಂದರು.

ನರಹರಿ ಹೇಳಿದ, 'ಮನುಷ್ಯ ಯಾರು ಎನ್ನುವುದಲ್ಲ ಮುಖ್ಯ, ಮನುಷ್ಯನೇ ಮುಖ್ಯ ಎಂದು ಸೂರ್ಯಕಾಂತ ರಾನಡೆ ಮೂವತ್ತು ವರ್ಷಗಳ ಹಿಂದೆ ಹೇಳಿದ್ದು ನನಗೆ ಈಗಲೂ ನೆನಪಿದೆ. ರಾನಡೆ ನನ್ನ ಗುರುವರ್ಯರು. ಹೈಸ್ಕೂಲಿನಲ್ಲಿ ಇಂಗ್ಲಿಷ್ ಕಲಿಸಿದವರು. ಕಲಿಯುವ ಮನಸ್ಸು ಇರುವವರಿಗೆ ಕಲಿಸಲು ಅವರು ಯಾವಾಗಲೂ ಸಿದ್ಧ. ರಾನಡೆ ಒಮ್ಮೊಮ್ಮೆ ಇಲ್ಲಿಗೆ ಬರುತ್ತಾರೆ. ನೀವು, ಹಿರಿಯರು ಕಿರಿಯರು ಎಲ್ಲರೂ ನಿಮ್ಮ ಮನಸ್ಸಿಗೆ ಆಗೊಮ್ಮೆ ಈಗೊಮ್ಮೆ ಬರುವ ಪ್ರಶ್ನೆಗಳನ್ನು ಬರೆದಿಡಿ. ಸ್ವಯಂ ಕಲಿಕೆಯ ಮುಖ್ಯ ವಿಧಾನ ಅದು. ಅದನ್ನು ವಿಜ್ಞಾನಿಗಳಾದವರು, ಲೇಖಕರಾದವರು ಮಾಡುತ್ತಾ ಇರುತ್ತಾರೆ. ಆ ಪ್ರಶ್ನೆಗಳಿಗೆ ಪುಸ್ತಕಗಳ ಓದಿನಲ್ಲಿ, ತಿಳಿದವರು ಆಡುವ ಮಾತಿನಲ್ಲಿ ಮತ್ತು ಕೆಲವೊಮ್ಮೆ ಸ್ವತಃ ನಿಮ್ಮಲ್ಲೇ ಉತ್ತರ ಸಿಗುತ್ತದೆ. ಇನ್ನು ನೀವು ಬರೆದಿರಿಸಿದ ಪ್ರಶ್ನೆಯನ್ನು ರಾನಡೆ ಬಂದಾಗ ಅವರಿಗೆ ಕೇಳಬಹುದು. ವಿಷಯ ಏನೇ ಆಗಿರಲಿ, ಅವರು ಉತ್ತರಿಸುತ್ತಾರೆ' ಎಂದ ನರಹರಿ.

(ಸಶೇಷ)